# ಬಾಪ್ತಿಸ್ಮ: ಪೂರ್ವಾಗತ್ಯತೆಗಳು ಮತ್ತು ಆಶೀರ್ವಾದಗಳು

ಬಾಪ್ತಿಸ್ಮಕ್ಕೆ ಅನೇಕ ಭಿನ್ನವಾದ ಉದ್ದೇಶಗಳು ಇರುವವು ಎಂದು ಕೆಲವರು ನಂಬುವಂತೆ ನಡಿಸಿದ್ದು ಬಾಪ್ತಿಸ್ಮಕ್ಕೆ ಸಂಬಂಧಿಸಿದ ಹಲವಾರು ಸತ್ಯಗಳು ಹೇಳಲ್ಪಟ್ಟಿವೆ. ಪ್ರಶ್ನೆಯಲ್ಲಿರುವ ಹೇಳಿಕೆಗಳು ಅನೇಕ ಭಿನ್ನವಾದ ಉದ್ದೇಶಗಳನ್ನು ಒಳಗೊಂಡಿರುವದಿಲ್ಲ, ಆದರೆ ನಾಲ್ಕು ವಿಭಾಗಗಳಲ್ಲಿ ಬರುತ್ತವೆ:

ಎ. *ಪೂರ್ವಾಗತ್ಯತೆಗಳು* - ಒಬ್ಬ ವ್ಯಕ್ತಿಯು ಬಾಪ್ತಿಸ್ಮ ಮಾಡಿಸಿಕೊಳ್ಳಲು ಅಗತ್ಯವಾಗಿರುವ ಕೃತ್ಯಗಳು, ಮನೋಭಾವನೆಗಳು ಮತ್ತು ಮೂಲಗಳು.

ಬಿ. *ಬಾಪ್ತಿಸ್ಮದಲ್ಲಿ ಹುಡುಕಿದ ಆಶೀರ್ವಾದಗಳು* - ಅಪೇಕ್ಷೆಗಳು ಭಿನ್ನವಾದ ರೀತಿಗಳಲ್ಲಿ ವಿವರಿಸಲ್ಪಟ್ಟಿವೆ. ಆದರೆ ದೇವರೊಂದಿಗಿನ ತಪ್ಪಾದ ಸಂಬಂಧವನ್ನು ಸರಿಪಡಿಸಲಿಕ್ಕಾಗಿ ಪಾಪಗಳ ಕ್ಷಮಾಪಣೆಗೆ ಎಲ್ಲವೂ ಸಂಬಂಧಿಸಿವೆ.

ಸಿ. *ಒಬ್ಬನ ಜೀವಿತವನ್ನು ಬದಲಾಯಿಸುವುದು* - ರಕ್ಷಿಸಲ್ಪಡಲು ಹುಡುಕುತ್ತಿರುವವನ ಹೃದಯದಿಂದ ವಿಧೇಯತೆಯ ಪರಿಣಾಮ.

ಡಿ. *ರಕ್ಷಿಸಲ್ಪಟ್ಟವರಿಗೆ ಲಭ್ಯವಿರುವ ಆಶೀರ್ವಾದಗಳು* - ಒಬ್ಬನ ಪಾಪಗಳು ಶುದ್ಧೀಕರಿಸಲ್ಪಡುವದರಿಂದ ಮತ್ತು ದೇವರೊಂದಿಗೆ ಸರಿಯಾದ ಸಬಂಧದಲ್ಲಿ ಪ್ರವೇಶಿಸುವದರಿಂದ ಪರಿಣಾಮವಾಗಿ ಬರುವ ಕ್ರೈಸ್ತ ಜೀವನದ ಪ್ರತಿಯೊಂದು ಲಾಭ ಇಲ್ಲವೇ ಅವಕಾಶ.

ಈ ಭಾಗಗಳ ಕಡೆಗೆ ನಿಕಟವಾಗಿ ನೋಡೋಣ:

ಎ. ಪೂರ್ವಾಗತ್ಯತೆಗಳು:

1. ಯೇಸುವಿನ ಮತ್ತು ಆತನ ಅಗತ್ಯತೆಗಳ ಬಗ್ಗೆ ಕೇಳುವುದು ಮತ್ತು ಅರ್ಥಮಾಡಿಕೊಳ್ಳುವುದು (ಅಪೊಸ್ತಲರ ಕೃತ್ಯಗಳು 18:8)
2. ಸುವಾರ್ತೆಯಲ್ಲಿ ಪ್ರಕಟಿಸಲ್ಪಟ್ಟಂತೆ ಯೇಸುವನ್ನು ಕರ್ತನಂತೆ ಮತ್ತು ರಕ್ಷಕನಂತೆ ನಂಬುವುದು (ಮಾರ್ಕ 16:16)
3. ಪಾಪಕ್ಕೆ ಸೇವೆ ಮಾಡುವದರಿಂದ ಯೇಸುವಿಗೆ, ಸೇವೆ ಮಾಡುವದಕ್ಕೆ ಬದಲಾವಣೆ ಹೊಂದಲು ತೀರ್ಮಾನಿಸಿಕೊಳ್ಳುವದರಿಂದ ಮಾನಸಾಂತರ (ಅಪೊಸ್ತಲರ ಕೃತ್ಯಗಳು 2:38)
4. ಯೇಸುವಿನಲ್ಲಿ ಕರ್ತನಂತೆ ನಂಬಿಕೆಯ ಅರಿಕೆ (ರೋಮಾಪುರ 10:10)
5. ಬಹಳ ನೀರು (ಯೋಹನ 3:23) ಹೂಣಿಡುವಿಕೆಗಾಗಿ ಮತ್ತು ಪುನರುತ್ಥಾನಕ್ಕಾಗಿ (ರೋಮಾಪುರ 6:4; ಕೊಲೊಸ್ಸೆ 2:12)

ಬಿ. ಬಾಪ್ತಿಸ್ಮದಲ್ಲಿ ಹುಡುಕಿದ ಆಶೀರ್ವಾದಗಳು:

1. ರಕ್ಷಣೆ (ಮಾರ್ಕ 16:16; 1 ಪೇತ್ರ 3:21)
2. ಕ್ಷಮಾಪಣೆ ಮತ್ತು ಪಾಪಗಳ ತೊಳೆಯುವಿಕೆ (ಅಪೊಸ್ತಲರ ಕೃತ್ಯಗಳು 2:38; 22:16; ಕೊಲೊಸ್ಸೆ 2:12, 13)
3. ಯೇಸುವಿನ ದೇಹದಲ್ಲಿ ಪ್ರವೇಶ (1 ಕೊರಿಂಥ 12:13)

4. ಕ್ರಿಸ್ತನೊಳಗೆ ಪ್ರವೇಶ (ರೋಮಾಪುರ 6:3)
5. ಯೇಸುವಿನ ಮರಣದಲ್ಲಿ ಪ್ರವೇಶ (ರೋಮಾಪುರ 6:3)

ಸಿ. ಒಬ್ಬನ ಜೀವಿತವನ್ನು ಬದಲಾಯಿಸುವುದು:

1. ಬಾಪ್ತಿಸ್ಮದಲ್ಲಿ ಯೇಸುವಿನ ಮರಣವನ್ನು ಹಂಚಿಕೊಳ್ಳುವ ಪರಿಣಾಮವಾಗಿ ಪಾಪಕ್ಕೆ ಮರಣ (ರೋಮಾಪುರ 6:1-4; ಕೊಲೊಸ್ಸೆ 3:3)
2. ನೂತನ ಜೀವನ (ರೋಮಾಪುರ 6:4)
3. ಯೇಸುವಿನ ನೂತನ ಜೀವನದ ಹೋಲಿಕೆ (ರೋಮಾಪುರ 6:5)
4. ಪೂರ್ವ ಸ್ವಭಾವವು ಶಿಲುಬೆಗೆ ಹಾಕಲ್ಪಟ್ಟದ್ದು (ರೋಮಾಪುರ 6:6)
5. ದೈಹಿಕ ಅಭಿಲಾಷೆಗಳನ್ನು ಮರಣಕ್ಕೊಪ್ಪಿಸುವುದು (ರೋಮಾಪುರ 6:6)
6. ಪಾಪದ ಸೇವೆಯಿಂದ ಬಿಡುಗಡೆ (ರೋಮಾಪುರ 6:6, 18)
7. ಒಬ್ಬನ ಜೀವಿತದ ಮೇಲೆ ಪಾಪದ ಬಲದಿಂದ ಬಿಡುಗಡೆ (ರೋಮಾಪುರ 6:7, 17, 18)
8. ನೀತಿಗೆ ದಾಸರಾಗುವುದು (ರೋಮಾಪುರ 6:18)
9. ಯೇಸುವನ್ನು ಧರಿಸಿಕೊಳ್ಳುವುದು (ಗಲಾತ್ಯ 3:27)
10. ಆತ್ಮಿಕವಾಗಿ ಸುನ್ನತಿಹೊಂದಿದ್ದು, ಶರೀರದ ಅಭಿಲಾಷೆಗಳನ್ನು ತೆಗೆದುಹಾಕಿದ್ದು (ಕೊಲೊಸ್ಸೆ 2:11-13)
11. ಆತ್ಮಿಕವಾಗಿ ಜೀವಿಸುವಂತೆ ಮಾಡಿದ್ದು (ಕೊಲೊಸ್ಸೆ 2:13)
12. ಹೊಸದಾಗಿ ಹುಟ್ಟುವುದು (ಯೋಹಾನ 3:3-5)
13. ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿ ಇಡಲ್ಪಟ್ಟದ್ದು (ಕೊಲೊಸ್ಸೆ 3:3)
14. ಕ್ರಿಸ್ತನಲ್ಲಿ ಎಲ್ಲರೂ ಒಂದೇಯಾಗಿರುವುದು (ಗಲಾತ್ಯ 3:28)

ಡಿ. ರಕ್ಷಿಸಲ್ಪಟ್ಟವರಿಗೆ ಲಭ್ಯವಿರುವ ಆಶೀರ್ವಾದಗಳು:

1. ಸಂತೋಷವುಳ್ಳವರಾಗಿರುವುದು (ಅಪೊಸ್ತಲರ ಕೃತ್ಯಗಳು 8:39)
2. ಪರಿಶುದ್ಧಾತ್ಮನ ವರ (ಅಪೊಸ್ತಲರ ಕೃತ್ಯಗಳು 2:38; 5:32; ಗಲಾತ್ಯ 4:6)
3. ನೀರಿಕ್ಷೆ (1 ಪೇತ್ರ 1:3, 4)
4. ದೇವರೊಂದಿಗೆ ಅನ್ಯೋನ್ಯತೆ (ಯೋಹಾನ 14:21)
5. ಇತರ ಕ್ರೈಸ್ತರೊಂದಿಗೆ ಅನ್ಯೋನ್ಯತೆ (ಅಪೊಸ್ತಲರ ಕೃತ್ಯಗಳು 2:42, 47)
6. ಕ್ರಿಸ್ತನಲ್ಲಿ ಬೆಳೆಯುವದಕ್ಕೆ ಅವಕಾಶ (ಎಫೆಸ 4:15)
7. ಕ್ರೈಸ್ತರಿಗಾಗಿ ಲಭ್ಯವಿರುವ ಪ್ರತಿಯೊಂದು ಆತ್ಮಿಕ ಆಶೀರ್ವಾದ (ಎಫೆಸ 1:3)
8. ದೇವರ ಸತತವಾದ ಜೋಪಾಸನೆ (ಇಬ್ರಿಯ 13:5)
9. ಒಳ್ಳೇ ಮನಸ್ಸಾಕ್ಷಿ (1 ಪೇತ್ರ 3:21)

ಬಾಪ್ತಿಸ್ಮ ಮಾಡಿಸಿಕೊಳ್ಳಲು, ಬಾಪ್ತಿಸ್ಮದ ಪೂರ್ವಾಗತ್ಯತೆಗಳನ್ನು ನಾವು ಪೂರೈಸತಕ್ಕದ್ದು ("A"ಯ ಅಡಿಯಲ್ಲಿ ಯಾದಿ ಮಾಡಿದ್ದೆಲ್ಲವನ್ನೂ), ನಂಬಿಕೆ ಅಂದರೆ ನಮ್ಮ ಉತ್ಥಾನವಾದ ಕರ್ತನಾದ, ಯೇಸುವಿನ ರಕ್ತದಲ್ಲಿ ನಂಬಿಕೆಯಿಡುವುದು. ಮಾನಸಾಂತರ ಅಂದರೆ ಯೇಸುವಿಗೆ ನಮ್ಮ ಜೀವಿತಗಳನ್ನು ಒಪ್ಪಿಸಿಕೊಳ್ಳುವದಕ್ಕಾಗಿ

ಹಿಂದಿನ ಜೀವಿತವನ್ನು ಬಿಟ್ಟು ಬಿಡುವಂತೆ ತೀರ್ಮಾನಿಸುವುದು. ಯೇಸುವಿನಲ್ಲಿ ಕ್ರಿಸ್ತನಂತೆ, ದೇವರ ಕುಮಾರನಂತೆ ನಂಬಿಕೆಯ ಅರಿಕೆ, ಅಂದರೆ ಅರ್ಥ, ನಮ್ಮ ಪಾಪಗಳಿಂದ ನಮ್ಮನ್ನು ಬಿಡುಗಡೆ ಮಾಡಬಲ್ಲ ಕರ್ತನಂತೆ ಆತನನ್ನು ಒಪ್ಪಿಕೊಳ್ಳು ವುದು (ರೋಮಾಪುರ 10:9, 10).[1]

ಈ ಪೂರ್ವಾಗತ್ಯತೆಗಳು ಇಲ್ಲದೆ, ಬಾಪ್ತಿಸ್ಮವು ಆತ್ಮಿಕವಾಗಿಯೂ ಇಲ್ಲವೇ ದೈಹಿಕವಾಗಿಯೂ ಸ್ವೀಕರಿಸಲ್ಪಡಲಾಗದು, ಹಾಗೂ ಬದಲಾವಣೆಯಾದ ಜೀವಿತವು ಹಿಂಬಾಲಿಸಲಾರದು.

"ಬಾಪ್ತಿಸ್ಮದಲ್ಲಿ ಹುಡುಕಲ್ಪಟ್ಟ ಆಶೀರ್ವಾದಗಳು" ("B" ಯ ಕೆಳಗೆ) ಎಂಬುದರ ಭಾಗದಲ್ಲಿ ಯಾದಿ ಮಾಡಿದ ಪ್ರತಿಯೊಂದು ಕ್ಷಮಾಪಣೆಯಲ್ಲಿ ಮತ್ತು ದೇವರೊಂದಿಗೆ ಹಾಗೂ ಕ್ರೈಸ್ತರೊಂದಿಗೆ ಹೊಸ ಸಂಬಂಧದಲ್ಲಿ ಪ್ರವೇಶಿಸುವದನ್ನು ಒಳಗೊಂಡಿರುತ್ತದೆ. ನಾವು ಬಾಪ್ತಿಸ್ಮ ಹೊಂದುವಾಗ, ದೇವರೊಂದಿಗೆ ತಪ್ಪಾದ ಸಂಬಂಧವನ್ನು ಸರಿಪಡಿಸಿಕೊಳ್ಳುತ್ತಿದ್ದೇವೆಂಬುದನ್ನು ಅರ್ಥಮಾಡಿಕೊಳ್ಳುವ ಅಗತ್ಯತೆಯಿದೆ. ಇದನ್ನು ಅರ್ಥಮಾಡಿಕೊಳ್ಳದೇ, ನಮ್ಮನ್ನು ನಮ್ಮ ಪಾಪಗಳಿಂದ ಶುದ್ಧೀಕರಿಸಲು ಪ್ರಾಯಶ್ಚಿತ್ತ ವಾಗಿರುವ ಯೇಸುವಿನ ರಕ್ತದಲ್ಲಿ, ನಂಬಿಕೆಯಿಡಲು ನಾವು ಶಕ್ತರಾಗುವದಿಲ್ಲ (ರೋಮಾಪುರ 3:25). ಹೀಗಿರುವದರಿಂದ, ಕ್ಷಮಾಪಣೆಯು, ತಿಳುವಳಿಕೆಯು ಕ್ಷಮಿಸಲ್ಪಡಲು ನಾವು ಬಾಪ್ತಿಸ್ಮ ಮಾಡಿಸಿಕೊಳ್ಳುತ್ತಿರುವಾಗ ಯೇಸುವಿನ ಶುದ್ಧೀಕ ರಿಸುವ ರಕ್ತದಲ್ಲಿ ನಮಗೆ ನಂಬಿಕೆ ಇರುವುದು ಅಗತ್ಯವಾಗಿದೆ.

ಇದೇ ಸತ್ಯ ಸುವಾರ್ತೆಯು ಸಾರಲ್ಪಟ್ಟಾಗ, "ನಂಬಿದವನು ಮತ್ತು ಬಾಪ್ತಿಸ್ಮ ಹೊಂದಿದವನು ರಕ್ಷಿಸಲ್ಪಡುವನು" (ಮಾರ್ಕ 16:16ಎ) ಎಂಬ ಯೇಸುವಿನ ಹೇಳಿ ಕೆಯಲ್ಲಿ ಬೋಧಿಸಲ್ಪಟ್ಟಿದೆ. "... ಶಾಸ್ತ್ರದಲ್ಲಿ ಮುಂತಿಳಿಸಿರುವ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳ ನಿವಾರಣೆಗಾಗಿ ಸತ್ತನು; ಹೂಣಲ್ಪಟ್ಟನು; ಶಾಸ್ತ್ರದ ಪ್ರಕಾರವೇ ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟನು" (1 ಕೊರಿಂಥ 15:3, 4) ಎಂಬುದು ಸುವಾರ್ತೆಯನ್ನು ಒಳಗೊಂಡಿದೆ, ಒಂದು ಗ್ರೀಕ ಗುಣವಾಚಕವು ಎರಡು ಅನಿಶ್ಚಿತ ಕಾಲ ಕೃದ್ವಾಚಕಗ ಳೊಂದಿಗೆ ("ನಂಬಿದರು" ಮತ್ತು "ಬಾಪ್ತಿಸ್ಮ ಹೊಂದಿದರು") ಎರಡರ ಕೃತ್ಯವು ಒಂದೇ ಸಮಯದಲ್ಲಿ ತೆಗೆದು ಕೊಳ್ಳಬೇಕೆಂಬುದನ್ನು ತೋರಿಸುತ್ತದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು, ಒಬ್ಬನು ಬಾಪ್ತಿಸ್ಮ ಹೊಂದುತ್ತಿರುವಾಗ - ಒಬ್ಬನು ಬಾಪ್ತಿಸ್ಮ ಹೊಂದುವಾಗ ಸುವಾರ್ತೆಯನ್ನು ನಂಬತಕ್ಕದ್ದು - ತನ್ನ ಪಾಪಗಳಿಗಾಗಿ ಯೇಸುವು ಮರಣ ಹೊಂದಿದನು ಎಂಬುದನ್ನು ನಂಬತಕ್ಕದ್ದೆಂದು ಯೇಸುವಿನ ಹೇಳಿಕೆಯಿಂದ ನಾವು ನೋಡುತ್ತೇವೆ.

ಬಾಪ್ತಿಸ್ಮದ ನಂತರ, ಬರುವ ನೂತನ ಜೀವವನ್ನು ("C"ಯ ಕೆಳಗೆ ಯಾದಿ ಮಾಡಿದ್ದನ್ನು) ಸಹ ನಾವು ಅರ್ಥಮಾಡಿಕೊಳ್ಳತಕ್ಕದ್ದು. ಆತ್ಮಿಕ ಒಳಗೊಳ್ಳುವಿಕೆ ಇಲ್ಲದೇ ಬಾಪ್ತಿಸ್ಮವು ನೂತನ ಜೀವವನ್ನು ತರಲಾರದು, ನೂತನ ಜೀವಿತವು ನಾವು ಬಾಪ್ತಿಸ್ಮ ಹೊಂದುವಾಗ ಯೇಸುವಿನ ಮರಣ ಹಾಗೂ ಹೂಣಿಡುವಿಕೆಯೊಂದಿಗೆ ಆತ್ಮಿಕ ಸಂಬಂಧದ ಪರಿಣಾಮವಾಗಿ ಬರುತ್ತದೆ. "ಒಬ್ಬನ ಜೀವಿತವನ್ನು ಬದಲಾಯಿಸುವುದು" ಎಂಬ ತಲೆ ಬರಹದ ಅಡಿಯಲ್ಲಿ ಯಾದಿ ಮಾಡಿದ ಪ್ರತಿಯೊಂದೂ ಈ ಒಂದು ಅರ್ಥದಲ್ಲಿ ಒಳಗೊಂಡಿರುತ್ತದೆ: ನಾವು ಬಾಪ್ತಿಸ್ಮ ಹೊಂದುವಾಗ, ನಾವು ಕ್ಷಮಿಸಲ್ಪಡುವಂತೆ ಮತ್ತು ಯೇಸುವನ್ನು ಹಿಂಬಾಲಿಸಲು ಪ್ರತಿಷ್ಠಿಸಿಕೊಂಡ ನೂತನ ಜೀವಿತ ಜೀವಿಸುವಂತೆ ನಾವು ಹಿಂದಿನ ಜೀವಿತವನ್ನು ಬಿಟ್ಟು ಬಿಡುತ್ತೇವೆ.

ರಕ್ಷಿಸಲ್ಪಟ್ಟವರಿಗೆ ಲಭ್ಯವಿರುವ ಎಲ್ಲಾ ಆಶೀರ್ವಾದಗಳನ್ನೂ ನಾವೆಂದೂ ತಿಳಿಯ

ಲಾರೆವು ಇಲ್ಲವೇ ಅರ್ಥಮಾಡಿಕೊಳ್ಳಲಾರೆವು. ಒಂದು ಸಲ ದೇವರೊಂದಿಗೆ ತಪ್ಪಾದ ಸಂಬಂಧವನ್ನು ಸರಿಪಡಿಸಿಕೊಳ್ಳಲು ಬಾಪ್ತಿಸ್ಮ ಹೊಂದಿದಾಗ ಹಾಗೂ ಯೇಸುವನ್ನು ಹಿಂಬಾಲಿಸುವದಕ್ಕೆ ಪ್ರತಿಷ್ಠಿಸಿಕೊಂಡ ನೂತನ ಜೀವನದಲ್ಲಿ ಪ್ರವೇಶಿಸಿದಾಗ ಅಸಂಖ್ಯಾತ ಆಶೀರ್ವಾದಗಳು ನಮಗೆ ಬರುವವು, ಇವುಗಳಲ್ಲಿ ಅನೇಕವು ("D"ಕೆಳಗೆ ಯಾದಿ ಮಾಡಿದವುಗಳು) ನಾವು ಕ್ರೈಸ್ತ ಜೀವಿತದಲ್ಲಿ ಮುಂದುವರಿಯುವಾಗ ಪ್ರತ್ಯಕ್ಷವಾಗುವವು.

ಬಾಪ್ತಿಸ್ಮವನ್ನು ಒಂದು ವಿವಾಹಕ್ಕೆ ಹೋಲಿಸ ಬಹುದು. ವಿವಾಹವಾಗ ಬೇಕಾದರೆ, ಒಬ್ಬನು ದೇಶದ ಕಾನೂನಿನಂತೆ ಯಾವುದರ ಅಗತ್ಯತೆ ಇದೆಯೆಂಬುದನ್ನು ಅರ್ಥಮಾಡಿಕೊಳ್ಳುವ ಅಗತ್ಯತೆ ಇರುತ್ತದೆ. ವಿವಾಹಿತ ಜೀವನದ ಆಶೀರ್ವಾದಗಳಲ್ಲಿ ಮತ್ತು ಲಾಭಗಳಲ್ಲಿ ಕೆಲವನ್ನು ಅರ್ಥಮಾಡಿಕೊಳ್ಳಬಹುದು, ಆದರೆ ಅವುಗಳಲ್ಲಿ ಎಲ್ಲವುಗಳನ್ನೂ ಅರ್ಥಮಾಡಿಕೊಳ್ಳುವ ಅವಶ್ಯಕತೆಯಿರುವದಿಲ್ಲ. ವಿವಾಹದ ಆಚರಣೆಯ ನಂತರ ವರ್ಷಗಳಾದ ಮೇಲೆ ಹೆಚ್ಚಿನ ಆಶೀರ್ವಾದಗಳನ್ನು ಕಂಡುಕೊಳ್ಳಬಹುದು.

ಇದು ಬಾಪ್ತಿಸ್ಮದೊಂದಿಗೂ ಸತ್ಯವಾಗಿರುವುದು: ನಮ್ಮ ಪಾಪಗಳು ಕ್ಷಮಿಸಲ್ಪಡಬೇಕಾದರೆ ಯಾವುದು ಅಗತ್ಯವಾಗಿದೆ ಎಂಬುದನ್ನು ನಾವು ನಂಬತಕ್ಕದ್ದು ಮತ್ತು ಅರ್ಥಮಾಡಿಕೊಳ್ಳತಕ್ಕದ್ದು. ರಕ್ಷಿಸಲ್ಪಟ್ಟವರು ಅನುಭವಿಸಬಹುದಾದ ಅನೇಕ ಆಶೀರ್ವಾದಗಳಲ್ಲಿ ಅನೇಕವುಗಳನ್ನು ನಾವು ತಿಳಿದಿರುದರಿಂದ ಬಾಪ್ತಿಸ್ಮ ಹೊಂದಲು ನಾವು ಅಪೇಕ್ಷಿಸಬಹುದು, ಆದರೆ ಬಾಪ್ತಿಸ್ಮ ಹೊಂದಿಕೊಳ್ಳುವದಕ್ಕಾಗಿ ಈ ಎಲ್ಲಾ ಕ್ರೈಸ್ತ ಆಶೀರ್ವಾದಗಳನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿರುವದಲ್ಲ. (ಈ ಪುಸ್ತಕದಲ್ಲಿಯ "ಬಾಪ್ತಿಸ್ಮದಲ್ಲಿ ತಿಳುವಳಿಕೆ, ನಂಬಿಕೆ, ಮತ್ತು ನಿರ್ಧಾರ" ಎಂಬ ಪಾಠವನ್ನು ನೋಡಿರಿ.)

ಅಪೊಸ್ತಲರ ಕೃತ್ಯಗಳು 2:38ರಲ್ಲಿ *eis* ("into" ಅಕ್ಷರಶಃ ಅರ್ಥಕೊಡುವ ಒಂದು ಗ್ರೀಕ ಪದವು) "for" ಎಂದು ಭಾಷಾಂತರಿಸಲ್ಪಟ್ಟಿದೆ. ಅಪೊಸ್ತಲರ ಕೃತ್ಯಗಳು 19:5ರಲ್ಲಿ ಅದೇ ಪದವು "in" ಎಂದು ಭಾಷಾಂತರಿಸಲ್ಪಟ್ಟಿದೆ. ಪಾಪಗಳ ಕ್ಷಮಾಪಣೆಗಾಗಿ ("for"; ಗ್ರೀಕ: *eis*) ಬಾಪ್ತಿಸ್ಮ ಮಾಡಿಸಿಕೊಳ್ಳುವದರಲ್ಲಿ "ಕ್ಷಮಾಪಣೆಯನ್ನು" ನಾವು ಅರ್ಥಮಾಡಿಕೊಳ್ಳಬೇಕು ಹಾಗೆಯೇ, ನಾವು ಬಾಪ್ತಿಸ್ಮ ಮಾಡಿಸಿಕೊಳ್ಳುವುದರಲ್ಲಿಯ ಹೆಸರಿನಲ್ಲಿ ("in"; ಗ್ರೀಕ: *eis*) ಎಂಬುದನ್ನು ಅರ್ಥಮಾಡಿಕೊಳ್ಳತಕ್ಕದ್ದು. ಯೇಸುವಿನ ಹೆಸರನ್ನು ಬಿಟ್ಟು ಬೇರೆ ಹೆಸರಿನಲ್ಲಿ ನಾವು ಬಾಪ್ತಿಸ್ಮ ಮಾಡಿಸಿಕೊಂಡಿದ್ದೇವೆ ಎಂದು ನಂಬಿದರೆ, ನಮ್ಮ ಬಾಪ್ತಿಸ್ಮವು ಬೆಲೆಯಿಲ್ಲದ್ದಾಗಿರುತ್ತದೆ - ಯಾಕಂದರೆ ರಕ್ಷಣೆಯನ್ನು ತರುವ ಬೇರೆ ಯಾವ ಹೆಸರೂ ನಮಗಿರುವದಿಲ್ಲ (ಅಪೊಸ್ತಲರ ಕೃತ್ಯಗಳು 4:12). *Eis* ಎಂಬ ಪದದ ಉಪಯೋಗವು ನಾವು ಬಾಪ್ತಿಸ್ಮ ಮಾಡಿಸಿಕೊಳ್ಳುವ ಹೆಸರನ್ನು ಅರ್ಥಮಾಡಿಸಿಕೊಳ್ಳುವದನ್ನು ಸ್ವೀಕರಿಸುವದನ್ನು ಅನ್ವಯಿಸುವಂತೆ, ಅದು ನಾವು ಬಾಪ್ತಿಸ್ಮ ಹೊಂದುವದರಲ್ಲಿಯ ಕ್ಷಮಾಪಣೆಯನ್ನೂ ಅನ್ವಯಿಸುತ್ತದೆ. ಕ್ಷಮಾಪಣೆಯನ್ನು ಹೊರತುಪಡಿಸಿ ಬೇರೆ ಯಾವುದೇ ಇತರ ಕಾರಣಕ್ಕಾಗಿ ಇರುವ ಬಾಪ್ತಿಸ್ಮವು, ಯೇಸುವಿನ ಹೆಸರಿನಲ್ಲಿ ಬಿಟ್ಟು ಬೇರೆ ಯಾವುದೇ ಹೆಸರಿನಲ್ಲಿ ಬಾಪ್ತಿಸ್ಮವು ಇರುವದಷ್ಟೇ ತಪ್ಪಾದದ್ದಾಗಿರುತ್ತದೆ.

© 2009 Truth for Today